ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:133:ಉಖಾಯೋ:08.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ-2,
ಬೆಂಗಳೂರು. ದಿ:09-04-2009.

ಇಂದ :
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

**ವಿಷಯ :** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಲ್ಲಾ ಕೂಲಿ ಕಾರ್ಮಿಕರಿಗೆ, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯನ್ನು ಹಾಗೂ ಆಮ್ ಆದ್ಮಿ ಭೀಮಾ ಯೋಜನೆಯ ವಿಮೆಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:-
1. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಇವರ ಅ.ಸ.ಪ.ಸಂ.ಜೆ-11060/11/2006 ಎನ್‌ಆರ್‌ಇಜಿಎ ದಿನಾಂಕ:13.1.209.
2. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶಕರು(ಎನ್‌ಆರ್‌ಇಜಿಎ) ಇವರ ಅ.ಸ.ಪ.ಸಂ.ಜೆ 11060/11/2006-ಎನ್‌ಆರ್‌ಇಜಿಎದಿನಾಂಕ:2-3-2009.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸುವ ಕೂಲಿಕಾರ ಕ್ಷೇಮಾಭಿವೃದ್ಧಿಯೇ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮುಖ್ಯ ಧ್ಯೇಯವಾಗಿರುತ್ತದೆ. ಕೂಲಿ ಕಾರರಿಗೆ ಕೂಲಿಯ ಹಣವು ನ್ಯಾಯಯುತವಾಗಿ ದೊರಕಲು ಹಾಗೂ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಕಾಪಾಡಲು, ಬ್ಯಾಂಕ್/ಅಂಚೆ ಕಛೇರಿಗಳ ಮೂಲಕ ಕೂಲಿಯ ವೇತನವನ್ನು ಪಾವತಿಸಲಾಗುತ್ತಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದಂತಾಗಿದೆ. ಇದಲ್ಲದೆ ಸಮಾಜದಲ್ಲಿ ಎನ್‌ಆರ್‌ಇಜಿಎ ಕೂಲಿ ಕಾರ್ಮಿಕರನ್ನು ದುರ್ಬಲವರ್ಗದವರೆಂದು ಗುರುತಿಸಲಾಗಿದೆ ಹಾಗೂ ಅರೋಗ್ಯ ತೊಂದರೆಗೆ ಬಹುಬೇಗ ತುತ್ತಾಗುವರೆಂದು ಪರಿಗಣಿಸಲಾಗಿದೆ. ಆದ್ದರಿಂದ, ಎಲ್ಲಾ ಎನ್‌ಆರ್‌ಇಜಿಎ ಕೂಲಿ ಕಾರ್ಮಿಕರಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿ, ಆರೋಗ್ಯ ವಿಮೆಯನ್ನು ಹಾಗೂ ಆಮ್ ಆದ್ಮಿ ಭೀಮಾ ಯೋಜನೆಯಡಿ ವಿಮೆಯನ್ನು (General Insurance) ಕೇಂದ್ರ ಸರ್ಕಾರದವರು, ಕೈಗೊಂಡಿರುವ ಕ್ರಮದ ಮಾದರಿಯಲ್ಲಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಸೂಚನೆ ನೀಡಿರುತ್ತದೆ.

ಈ ಮೇಲ್ಕಂಡ ಎರಡು ವಿಮಾ ಯೋಜನೆಗಳಲ್ಲಿ ಎನ್‌ಆರ್‌ಇಜಿಎ ಕೂಲಿ ಕಾರ್ಮಿಕರು ಅರ್ಹತೆ ಪಡೆಯಬೇಕಾದರೆ, ಯೋಜನೆಯ ಕಾಮಗಾರಿಗಳಲ್ಲಿ ಕನಿಷ್ಠ ಐವತ್ತು ದಿನಗಳನ್ನು ಪೂರೈಸಿರಬೇಕು. ಈ ಷರತ್ತಿಗೆ ಒಳಪಟ್ಟು ಈ ಎರಡು ಯೋಜನೆಗಳ ವಿಮೆಯನ್ನು ಕಾರ್ಮಿಕರಿಗೆ ವಿಸ್ತರಿಸಲು, ಕ್ರಮ ಜರುಗಿಸಬೇಕು. ಈ ಯೋಜನೆಯಡಿ, ಕೂಲಿ ಕಾರ್ಮಿಕರ ಆರ್ಥಿಕ ಸ್ಥಿತಿಗತಿಗಳ ತಾರತಮ್ಯವಿಲ್ಲದೇ ಎಲ್ಲರಿಗೂ ಇದರ ಲಾಭವನ್ನು ನೀಡಬಹುದಾಗಿರುತ್ತದೆ.

ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯನ್ನು ಸಮನ್ವಯ ಮಾಡಲು ಕಾರ್ಮಿಕ ಇಲಾಖೆಯನ್ನು ನೋಡಲ್ ಏಜೆನ್ಸಿಯಾಗಿ ನೇಮಕಾತಿ ಮಾಡಲಾಗಿರುತ್ತದೆ. ಆದುದರಿಂದ, ತಾವು ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆಲ್ಲ ಆರೋಗ್ಯ ವಿಮೆಯನ್ನು ವಿಸ್ತರಿಸಲು, ಜಿಲ್ಲಾ ಮಟ್ಟದಲ್ಲಿರುವ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

ಈ ಹಿಂದೆ, ಆಮ್ ಆದ್ಮಿ ಭೀಮಾ ಯೋಜನೆಯಡಿ, ಎನ್‌ಆರ್‌ಇಜಿಎ ಕೂಲಿ ಕಾರ್ಮಿಕರ ಭೂರಹಿತ ಕುಟುಂಬಗಳಿಗೆ ಮಾತ್ರ ಪರಿಗಣಿಸಿ, ವಿಮೆಯನ್ನು ವಿಸ್ತರಿಸುವಂತೆ ತಿಳಿಸಲಾಗಿತ್ತು. ಈಗ ಈ ಸಾಮಾನ್ಯ ವಿಮೆಯನ್ನು ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಎಲ್ಲಾ ಕೂಲಿ ಕಾರ್ಮಿಕರು ಕಾಮಗಾರಿ ಗಳಲ್ಲಿ ಯಾರು 50 ದಿನಗಳನ್ನು ಪೂರೈಸಿರುತ್ತಾರೋ, ಅಂತಹವರಿಗೆ, ಈ ವಿಮೆಯ ಲಾಭವನ್ನು/ಸೌಲಭ್ಯವನ್ನು ವಿಸ್ತರಿಸಲು ತೀರ್ಮಾನಿಸಲಾಗಿರುತ್ತದೆ. ಈ ಕುರಿತು, ಸರ್ಕಾರದ ಮಟ್ಟದಲ್ಲಿರುವ ಕಂದಾಯ ಇಲಾಖೆಯವರಿಗೆ ಕೂಡ ಸೂಕ್ತವಾದ ಸೂಚನೆಗಳೊಂದಿಗೆ ತಿಳಿಸಲಾಗಿರುತ್ತದೆ. ಆಮ್ ಆದ್ಮಿ ಭೀಮಾ ಯೋಜನೆಯ ಸಾಮಾನ್ಯ ವಿಮೆಯನ್ನು ಸಮನ್ವಯ ಮಾಡಲು, ಕಂದಾಯ ಇಲಾಖೆಯನ್ನು ನೋಡಲ್ ಏಜೆನ್ಸಿಯಾಗಿ ನೇಮಕಾತಿ ಮಾಡಲಾಗಿರುತ್ತದೆ. ಆದುದರಿಂದ ತಾವು ಈ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆಲ್ಲ ಆಮ್-ಆದ್ಮಿ ಭೀಮಾ ಯೋಜನೆಯ ಸಾಮಾನ್ಯ ವಿಮೆಯನ್ನು ವಿಸ್ತರಿಸಲು, ಜಿಲ್ಲೆಯಲ್ಲಿರುವ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

ಮೇಲೆ ನೀಡಲಾದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

(ಡಾ.ಪಿ.ಸಿ.ಜಾಫರ್)
ನಿರ್ದೇಶಕರು,
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ